**ದಿನಾಂಕಃ 23-08-2024** **OS NO.40/2024(ಪಿ.ಡಬ್ಲು.1)**

**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ವಿ.ಆರ್.ಆರ್. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ ಸರ್ವೆ ನಂಬರ 69/2 ರ ಒಂದು ಪುಟದಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-1 ಎಂದು, ಹಿಸ್ಸಾ ನಕಾಶೆಯ ದೃಢೀಕೃತ ನಕಲನ್ನು ನಿಪಿ-2 ಎಂದು, ನಮೂನೆ-10 ರ ದೃಢೀಕೃತ ನಕಲನ್ನು ನಿಪಿ-3 ಎಂದು, ಆಕಾರ ಬಂದನ ದೃಢೀಕೃತ ನಕಲನ್ನು ನಿಪಿ-4 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಎಸ್.ಬಿ.ಕೆ. ವಕೀಲರು ಸಮಯ ಕೋರಿದ್ದು ಮತ್ತು ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸದೆ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**